23. The Industrial Statistics Act, 1948 and Rules.

24. The Essential Services Maintenance Act, 1952.

Sri D. VENKATESH.—Are the Government aware that the Central Government and some State Governments are regularly and annually preparing Administration Reports of each of the enactments of the Industrial law ?

Sri A. G. RAMACHANDRA RAO.—Yes; Government is aware of it and it is trying to bring that in Mysore also.

Shops and Establishments Act—Mysore City.

Q.—979. **Sri U. M. MADAPPA** (Chamarajanagar).—

Will the Government be pleased to state :—

(*a*) whether any representations have been received from the merchants of Mysore City stating that some of the merchants under some circumstances are experiencing difficulties by the introduction of the Shops and Establishments Act ;

(*b*) if so, what the difficulties set out in that representation are ?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) Does not arise in view of answer to (*a*).

ಶ್ರೀ ಯು. ಎಂ. ಮಾದಪ್ಪ.—ನಣ್ಣ ಪುಟ್ಟ ಅಂಗಡಿಗಳ ಮಾಲೀಕರು ಕೆಲಸಗಾರರನ್ನಿಟ್ಟುಕೊಂಡಿರುವುದಿಲ್ಲ; ಅಂಗಡಿ ಕೆಲಸ ತಾವೇ ಮಾಡುತ್ತಾರೆ. ಅಂಥ ವರೂ ಕೂಡ ಈ ಆಕ್ಟ್ ಪ್ರಕಾರ ಅಂಗಡಿಯನ್ನು ವಾರಕ್ಕೊಂದು ದಿವಸ ಮುಚ್ಚಬೇಕ್ಕಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಅವರಿಗೂ ಈ ಆಕ್ಟು ಅನ್ವಯವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಅಂಥವರಿಗೆ ವಿನಾಯಿತಿ ಕೊಡುತ್ತೀರಾ ? ಮಾಲೀಕರೇ ಎಲ್ಲ ಕೆಲಸಗಳನ್ನೂ ಮಾಡುವಾಗ ಯಾರಿಗೂ ತೊಂದರೆಯಿಲ್ಲವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೂ ಸಹ ವಾರಕ್ಕೊಂದು ದಿನ ರಜಾ ತೆಗೆದುಕೊಳ್ಳುವುದು ಉತ್ತಮವೆಂದು ಕಾಣುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಆ ರೀತಿ ವಾರಕ್ಕೊಂದು ದಿವಸ ರಜ ತೆಗೆದುಕೊಂಡರೆ ಅವರಿಗೆ ತೊಂದರೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಬಾಕಿ ದಿವಸಗಳಲ್ಲಿ ಚೆನ್ನಾಗಿ ಕೆಲಸಮಾಡಲು ಅವಕಾಶವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಪ್ರತಿನಿತ್ಯವೂ ಆಯಾ ದಿನದ ದುಡಿಮೆಯಿಂದ ಗುಟುಮಾಡುತ್ತಿರುವವರಿಗೆ ಒಂದು ದಿವಸ ದುಡಿಯದಿದ್ದರೆ ಅವರಿಗೆ ಜೀವನ ನಡೆಯುವುದು ಹೇಗೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಜಾ ದಿವಸಕ್ಕೆ ಬಾಕಿ ದಿವಸಗಳಲ್ಲಿ ಸಂಪಾದನೆ ಮಾಡಬೇಕು.

ಶ್ರೀ ಯು. ಎಂ. ಮಾದಪ್ಪ.—ಈಗಿರುವ ಅಂಗಡಿಗಳ ಮತ್ತು ಸಾಪ್ಟೆಗಳ ಆಕ್ಟಿನ 5 ಮತ್ತು 6ನೆಯ ಸೆಕ್ಷನ್ ಪ್ರಕಾರ ವಿನಾಯಿತಿ ಕೊಡಲು ಅವಕಾಶವಿದೆ. ಅದರಂತೆ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಅವಶ್ಯಕತೆ ಕಂಡುಬಂದಿಲ್ಲ.

ಶ್ರೀ ಆರ್. ಅನಂತರಾಮ್.—ಈ ಆಕ್ಟಿನಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ತಿದ್ದುಪಡಿ ತರಲು ಪ್ರಯತ್ನ ನಡೆದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಂಸ್ಥಾನದ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಈ ವಿಷಯವನ್ನು ಪರ್ಯಾಲೋಚಿಸುತ್ತಿವೆ.

ಶ್ರೀ ಆರ್. ಅನಂತರಾಮ್.—ಈ ಅಧಿವೇಶನದಲ್ಲಿ ತಿದ್ದುಪಡಿ ತರುತ್ತೀರಾ ಅಥವಾ ಮುಂದಿನ ಅಧಿವೇಶನದಲ್ಲಿ ತರುತ್ತೀರಾ ?

Sri A. G. RAMACHANDRA RAO.—We are in correspondence with Government of India.

Sri K. S. VASAN.—Is it a weekly holiday for the worker or a weekly holiday for the sales, Sir ?

Sri A. G. RAMACHANDRA RAO.—Holiday for the worker in that shop.

Sri K. S. VASAN.—Then, where is the weekly holiday if the shop is run by the owner himself ?

Sri A. G. RAMACHANDRA RAO.—He is also a worker and he needs a holiday.

Railway line between Mysore and Coorg via Hunsur.

Q—856. **Sri D. DEVARAJ URS** (Hunsur).—

Will the Government be pleased to state :—

(*a*) whether it is not a fact that a resolution was passed unanimously in this Assembly during its last Budget session recommending to the Central Government to put up a Railway line between Mysore and Coorg *via* Hunsur ;

(*b*) what is the action taken by our Government on this resolution ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) A recommendation was made to Government of India to take up the construction of this Railway line.

ಶ್ರೀ ಡಿ. ದೇವರಾಜ ಅರಸ್.—ಕೇಂದ್ರ ಸರ್ಕಾರಕ್ಕೆ ತಮ್ಮ ಶಿಫಾರ್ಸು ಕಳುಹಿಸಿದುದು ಯಾವಾಗ? In the last Budget Session a resolution was passed.

Sri Kadidal MANJAPPA.—It has been communicated and I have also got a reply.

1 P.M.

ಶ್ರೀ ಡಿ. ದೇವರಾಜ ಅರಸ್.—ಭಾರತ ಸರ್ಕಾರದವರು ಈ ವಿಚಾರದಲ್ಲಿ ಏನು ಕಾರ್ಯಕ್ರಮ ಕೈಗೊಂಡಿದ್ದಾರೆಂಬುದನ್ನು ವಿಚಾರಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸಿದ್ದೇವೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಳೂರು-ಹಾಸನ ರೈಲ್ವೆ ಲೈನ್ ಬಿಟ್ಟು ಬೇರೆ ಯಾವುದೂ ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸಿಕೊಳ್ಳುವಂತೆ ಭಾರತ ಸರ್ಕಾರಕ್ಕೆ ಶಿಫಾರ್ಸುಮಾಡಿ ಇದನ್ನು ಸೇರಿಸಲು ಸಾಧ್ಯವಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಪಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಈ resolution ಆಧಾರದ ಮೇಲೆ ಸರ್ಕಾರದವರು ಈ ಬಗ್ಗೆ preliminary survey ಮಾಡ್ಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ತಮ್ಮ ಸ್ಟೇಟ್ ರೇಜಿಸ್ಲೇಚರ್ ಅಭಿಪ್ರಾಯಕ್ಕೆ ಪುರಸ್ಕಾರ ಕೊಟ್ಟು ಅದನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುವುದು ತಮಗೆ ಸೇರಿದುದಲ್ಲವೇ?

Mr. SPEAKER.—They are doing it; that is what he said.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮದ್ದೂರು-ಮಳವಳ್ಳಿ ಮಾರ್ಗವಾಗಿ ರೈಲ್ವೆ ಲೈನ್ ಹಾಕುವ ವಿಚಾರವಾಗಿ ಈ ಅಸೆಂಬ್ಲಿಯಲ್ಲಿ ಹಿಂದೆ ರೆಸಲ್ಯೂಷನ್ ಆಗಿರಲಿಲ್ಲವೇ?

Sri Kadidal MANJAPPA.—That question does not arise strictly.

Desilting Venkateshsagara tank, Chintamani Taluk.

Q.—1016. **Sri M. C. ANJANEYA REDDY** (Chintamani).—

Will the Government be pleased to state:—

(*a*) the extent of capacity reduced as a result of accumulation of silt due to non-repair of sluices to Venkateshsagara tank in Chintamani Taluk;

(*b*) whether there is a scheme to repair that tank in the near future?

A.—**Sri Kadidal MANJAPPA** (Minister for Revenue and Public Works).—

(*a*) No survey has been conducted regarding accumulation of silt. Silt accumulation is not due to non-repair of sluice.

(*b*) Yes.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—'ಎ' ಭಾಗದ ಪ್ರಶ್ನೆಗೆ ಉತ್ತರವಾಗಿ ವೆಂಕಟೇಶ ಸಾಗರ ಕೆರೆಗೆ ಹೂಳು ತುಂಬಿರುವ ವಿಚಾರದಲ್ಲಿ ಸರ್ವೆ ಮಾಡಿಲ್ಲವೆಂದು ತಿಳಿಸಿದ್ದೀರಿ. ಈ ಅಂಶ ಅಲ್ಲಿನ ಅಸಿಸ್ಟೆಂಟ್ ಇಂಜನಿಯರಿಗೆ ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಸಿಲ್ಟ್ ತುಂಬಿಕೊಂಡಿರುವ ವಿಚಾರ ಗೊತ್ತಿರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಕೆರೆ ಚಿಂತಾಮಣಿ ತಾಲ್ಲೂಕಿನ ದೊಡ್ಡ ಕೆರೆ ಎಂದು ಭಾವಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥ ವಿಚಾರಗಳನ್ನು ಭಾವಿಸುವುದಕ್ಕಾಗುವುದಿಲ್ಲ, ನಿರ್ಧರವಾಗಿ ಹೇಳಬೇಕು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ನಾನು ಆ ರೀತಿ ಅಭಿಪ್ರಾಯಪಡುತ್ತೇನೆ, ಅದನ್ನು ತಾವು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಂಬುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಕೆರೆಯ sluice ರಿಪೇರಿ ಮಾಡಿನದೇ ಇರುವ ಕಾರಣದಿಂದ ಸುಮಾರು 18 ಅಡಿಯಷ್ಟು ಹೂಳು ಮುಚ್ಚಿಕೊಂಡು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಆ ಕೆರೆಯ ರಿಪೇರಿ ಕೆಲಸವನ್ನು ಕೈಗೊಳ್ಳಲು ಪ್ರಯತ್ನಪಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ವಿಚಾರವನ್ನು ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ನಿರ್ಲಕ್ಷ್ಯವಾಡುತ್ತಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಇದು technical matter. ಆದಕಾರಣ ಇಂಥ ವಿಚಾರದಲ್ಲಿ ನಿರ್ಧಾರಕ್ಕೆ ಬರುವುದರಲ್ಲಿ ತಡವಾಗಿರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ರೀತಿ ಹೂಳು ಮುಚ್ಚಿರುವುದರಿಂದ sluice ಗೆ ಅಡಚಣೆಯಾಗಿ ಅದರಿಂದ ಬಹಳ ತೊಂದರೆಯುಂಟಾಗಿದೆ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—Silt ಇರುವುದು ತೂಬಿನಲ್ಲಿ ಹೋಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇದಕ್ಕೆ covering sluices ಇಟ್ಟಿರುವುದು ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.